ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು

PAPER CLIPPINGS

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡ ಪ್ರಭ     ದಿನಾಂಕ : DATE: 27/10/20

# ಸರಳ ಜಂಬೂಸವಾರಿ

## ಮೈಸೂರು ಅರಮನೆಗೆ ಸೀಮಿತವಾದ ವಿಶ್ವವಿಖ್ಯಾತ ಜಂಬೂಸವಾರಿ
## ಅಂಬಾರಿಯಲ್ಲಿದ್ದ ಚಾಮುಂಡೇಶ್ವರಿಗೆ 5ನೇ ಬಾರಿ ಬಿಎಸ್‌ವೈ ಪೂಜೆ
## 2 ಸ್ತಬ್ಧಚಿತ್ರ, 5 ಕಲಾತಂಡ ಭಾಗಿ, ಅರ್ಧತಾಸಲ್ಲಿ ಮುಗಿದ ಮೆರವಣಿಗೆ

**• ಅಂಶಿ ಪ್ರಸನ್ನಕುಮಾರ್**
**ಕನ್ನಡಪ್ರಭ ವಾರ್ತೆ** ಮೈಸೂರು

ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಕೊನೆಯ ದಿನದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಯು ಕೋವಿಡ್ ಹಿನ್ನೆಲೆಯಲ್ಲಿ ಸೋಮವಾರ ಸರಳ, ಸಾಂಪ್ರದಾಯಿಕವಾಗಿ ಅರಮನೆ ಆವರಣದಲ್ಲಿ ಸೀಮಿತ ಪ್ರೇಕ್ಷಕರ ಸಮ್ಮುಖದಲ್ಲಿ ನಡೆಯಿತು. ವಿಜಯದಶಮಿ ಅಂಗವಾಗಿ ನಡೆದ ಈ ಮೆರವಣಿಗೆಯನ್ನು ನೇರವಾಗಿ ನೋಡುವ ಅವಕಾಶ ಕೇವಲ 300 ಮಂದಿಗೆ ಮಾತ್ರ ಲಭ್ಯವಾಯಿತು. ಹೀಗಾಗಿ ಟಿವಿ, ಆನ್‌ಲೈನ್‌ನಲ್ಲಿ ಲಕ್ಷಾಂತರ ಮಂದಿ ವೀಕ್ಷಿಸಿದರು.

ಮೆರವಣಿಗೆಗೆ ಚಾಲನೆ ನೀಡುವ ಅವಕಾಶ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರಿಗೆ ಐದನೇ ಬಾರಿಗೆ ಲಭಿಸಿತು. ನವರಾತ್ರಿಯ ವೈಭವಕ್ಕೆ ಕಳಸಪ್ರಾಯವಾದ ಜಂಬೂ ಸವಾರಿಯಲ್ಲಿ ಗಜರಾಜ 'ಅಭಿಮನ್ಯು' ಮೊದಲ ಬಾರಿಗೆ 750 ಕೆಜಿ ತೂಕದ ಚಿನ್ನದ ಅಂಬಾರಿಯನ್ನು ಹೊತ್ತು ಸಂಗಾತಿಗಳಾದ 'ವಿಜಯ' ಹಾಗೂ 'ಕಾವೇರಿ' ಅವರೊಂದಿಗೆ ಹೆಜ್ಜೆಹಾಕಿದ. ಅಂಬಾರಿಯಲ್ಲಿ ಶ್ರೀ ಚಾಮುಂಡೇಶ್ವರಿ ಮೂರ್ತಿಯನ್ನು ಕಂಡ ಅರಮನೆಯ ಆವರಣದಲ್ಲಿ ನೆರೆದಿದ್ದ ಸೀಮಿತ ಸಂಖ್ಯೆಯ ಜನರಲ್ಲೂ ಸಂತಸ. ಆದರೆ ಹಿಂದಿನ ವರ್ಷಗಳಂತೆ 'ಚಾಮುಂಡಿ ಮಾತಾ ಕೀ...' ಮತ್ತಿತರ ಜೈಕಾರಗಳು ಕೇಳಿ ಬರಲಿಲ್ಲ. ಉತ್ತರದ ಬಲರಾಮ ದ್ವಾರದವರೆಗೆ, ಅಂದರೆ ಸುಮಾರು 500 ಮೀಟರ್ ಸಾಗಿದ ಮೆರವಣಿಗೆ ಅರ್ಧ ತಾಸಿನಲ್ಲಿ ಮುಗಿಯಿತು.

➘ 6



ವಿಶ್ವವಿಖ್ಯಾತ ಮೈಸೂರು ದಸರಾ ಮಹೋತ್ಸವದ ಪ್ರಮುಖ ಆಕರ್ಷಣೆಯಾದ ಜಂಬೂಸವಾರಿಯಲ್ಲಿ ಗಜರಾಜ 'ಅಭಿಮನ್ಯು' ಹೊತ್ತಿರುವ 750 ಕೆಜಿ ತೂಕದ ಚಿನ್ನದ ಅಂಬಾರಿಯಲ್ಲಿರುವ ಶ್ರೀ ಚಾಮುಂಡೇಶ್ವರಿ ವಿಗ್ರಹಕ್ಕೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುಷ್ಪಾರ್ಚನೆ ನೆರವೇರಿಸಿದರು.